# ಆಹಾ ಸುದ್ದಿ!

★ ಸಸಿತೋಟ




ಅಮೆರಿಕದ ಅರಿಝೋನ ಶಾಲೆಗೆ ಕಳವು ಮಾಡಲೆಂದು ಗೇಟ್ ಹಾರಿದ ಈ ಕಳ್ಳನ ಅವಸ್ಥೆ ನೋಡಿ. ಆತ ಧರಿಸಿದ್ದ ಪ್ಯಾಂಟ್ ಗೇಟ್‌ನ ಸರಳಿಗೆ ಸಿಕ್ಕಿ ತಲೆ ಕೆಳಗಾಗಿ ನೇತಾಡಿದನಂತೆ. ಇದನ್ನು ನೋಡಿ ದಾರಿಹೋಕನೊಬ್ಬ ತೆಗೆದ ಫೋಟೊ ಇದು. ದಾರಿಹೋಕ ವಿಡಿಯೋ ಮಾಡಲೆಂದು ವಾಪಸ್ಸು ಬರುವುದರೊಳಗಾಗಿ ಕಳ್ಳ ಪೊಲೀಸರ ಕಾರಲ್ಲಿ ಕೋಳ ಹಾಕಿಸಿಕೊಂಡು ಕೂತಿದ್ದನಂತೆ. ಕಳವು ಮಾಡಿಕೊಂಡು ಹೋಗುವ ಬದಲು ಸರ್ಕಸ್ ಮಾಡಲು ಹೋದದ್ದೇ ಪೊಲೀಸರ ಕೈಗೆ ಸಿಕ್ಕಿಹಾಕಿಕೊಳ್ಳಲು ಕಾರಣವಿರಬಹುದು.

ಅಡುಗೆಮನೆಯಲ್ಲಿ ಗ್ಯಾಸ್ ಲೀಕ್ ಆದರೆ ಬೆಂಕಿ ಹೊತ್ತಿಕೊಳ್ಳುತ್ತದೆ ಎಂಬುದು ಸಾಮಾನ್ಯ ವಿಷಯ. ಆದರೆ ಮನುಷ್ಯ ಗ್ಯಾಸ್ ಬಿಟ್ಟರೆ.. ಆಗಲೂ ಬೆಂಕಿ ಹೊತ್ತಿಕೊಂಡು ದೇಹದ ಕೆಲವು ಭಾಗವನ್ನು ಸುಟ್ಟ ಘಟನೆ ಜಪಾನ್‌ನಲ್ಲಿ ನಡೆದಿದೆಯಂತೆ. ಆಸ್ಪತ್ರೆಯಲ್ಲಿ ಗರ್ಭಕಂಠದ ಶಸ್ತ್ರಚಿಕಿತ್ಸೆಗೆ ಒಳಗಾದ ಮಹಿಳೆಯೊಬ್ಬಳಿಗೆ ಲೇಸರ್ ಉಪಕರಣ ಲಗತ್ತಿಸಲಾಗಿತ್ತು. ಶಸ್ತ್ರಚಿಕಿತ್ಸೆ ಸಂದರ್ಭದಲ್ಲಿ ಆಕೆಗೆ ಅರ್ಜೆಂಟಾಗಿ ಗ್ಯಾಸ್ ಬಿಟ್ಟಿದ್ದೇ ತಡ, ಲೇಸರ್ ಪರಿಣಾಮದಿಂದಾಗಿ ಆಕೆ ತೊಟ್ಟಿದ್ದ ಆಸ್ಪತ್ರೆಯ ಉಡುಪಿಗೆ ಬೆಂಕಿ ಹೊತ್ತಿಕೊಂಡಿತಂತೆ. ಬಸ್, ವಿಮಾನಗಳಲ್ಲಿ ದಹ್ಯ ವಸ್ತುವಿಗೆ ಪ್ರವೇಶವಿಲ್ಲ ಎಂಬ ಬೋರ್ಡ್‌ನಲ್ಲಿ ಮಾನವ ಗ್ಯಾಸ್ ಅನ್ನೂ ಸೇರಿಸಬಹುದು.

ಬ್ಯಾಂಕಾಕ್‌ನಲ್ಲಿ ವಧುಗಳಿಗಾಗಿ ಓಟ ಇತ್ತೀಚೆಗೆ ತುಂಬಾ ಖ್ಯಾತಿ ಪಡೆದಿದೆಯಂತೆ. ಸಾಮೂಹಿಕ ವಿವಾಹದಲ್ಲಿ ಪಾಲ್ಗೊಂಡವರು ಓಟದ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವುದು ಜನಪ್ರಿಯವಾಗಿದೆಯಂತೆ. ಆದರೆ ಸುದ್ದಿ ಅದಲ್ಲ, ಇತ್ತೀಚೆಗೆ ವಧುವೊಬ್ಬಳು ಓಡುತ್ತ ಓಡುತ್ತ ಕಾಯುತ್ತ ನಿಂತಿದ್ದ ನಲ್ಲನ ಜೊತೆಗೆ ಜಂಟಿಯಾಗಿ ಓಡುತ್ತ ಮಾಯವಾದಳಂತೆ. ಸ್ಪರ್ಧೆಯ ಆಯೋಜಕರು ಈಗ ಪೊಲೀಸರಿಂದ ತಪ್ಪಿಸಿಕೊಂಡು ಓಡುತ್ತಿದ್ದಾರಂತೆ.





ಬ್ರಿಟನ್ನಿನ ಈ ರ್‍ಯಾಡ್‌ಫೋರ್ಡ್ ದಂಪತಿ ತಮ್ಮ 20ನೇ ಮಗುವಿನ ಆಗಮನ ಸೆಪ್ಟೆಂಬರ್‌ನಲ್ಲಿ ಎಂದು ಘೋಷಿಸಿದ್ದಾರಂತೆ. 40ರ ಹರೆಯದಲ್ಲಿರುವ ದಂಪತಿಯ ಮೊದಲ ಮಗನಿಗೆ 27 ವರ್ಷಗಳಾದರೆ, ಕಿರಿಯ ಮಗಳಿಗೆ 9 ತಿಂಗಳಂತೆ. ಆದರೆ ಇಲ್ಲಿಯೂ ಭಾರತೀಯರ ಸಾಧನೆ ಹಿಮ್ಮೆಟ್ಟಿಸಲು ಸಾಧ್ಯವಾಗಿಲ್ಲ ಎಂಬುದೇ ಹೆಮ್ಮೆಯ ಸಂಗತಿ. ಭಾರತದ ಮಿಝೋರಾಂನ ಝಿಯೋನಾ ಚನಾ ಎಂಬಾತನಿಗೆ 94 ಮಕ್ಕಳಿವೆಯಂತೆ. ಆದರೆ ಇದು ಸಾಧ್ಯವಾಗಿದ್ದು 39 ಹೆಂಡತಿಯರಿಂದ.



ಒಕ್ಲಾಹೊಮಾ ವಿಶ್ವವಿದ್ಯಾನಿಲಯದ ಈ ಇಬ್ಬರು ವಿದ್ಯಾರ್ಥಿನಿಯರು 56 ಬಾಕ್ಸ್ ಮೆಕರೊನಿ ಬೇಯಿಸಿ, ಜೊತೆಗೆ ಚೀಸ್ ಸೇರಿಸಿ.. ಊಹೂಂ ತಿನ್ನಲಿಲ್ಲ, ಬದಲಾಗಿ ಬಾತ್‌ಟಬ್‌ಗೆ ಸುರಿದು ಸ್ನಾನ ಮಾಡಿದರಂತೆ. ಯಾವುದಾದರೂ ತಿನಿಸು ಇಷ್ಟವಾದರೆ, ಅದರಲ್ಲೇ ಮುಳುಗೇಳುತ್ತಾರೆ ಎಂಬ ಮಾತನ್ನು ಅಕ್ಷರಶಃ ನಿಜ ಮಾಡಿಬಿಟ್ಟಿದ್ದಾರೆ.

ಉಚಿತ ಜಿಯೊ ಅಂತರ್ಜಾಲ ಸಂಪರ್ಕಕ್ಕಾಗಿ ಎಷ್ಟೆಲ್ಲಾ ಫಜೀತಿ ಪಟ್ಟಿದ್ದಾರೆ ಮೊಬೈಲ್‌ಪ್ರಿಯರು. ಆದರೆ ಬಳ್ಳಾರಿಯ ಸಿರಗುಪ್ಪಾದ ಚಾಯ್‌ವಾಲಾ ಸಯದ್ ಬಾಷಾ ಐದೇ ರೂಪಾಯಿಗೆ ಅರ್ಧ ತಾಸಿನ ಅಂತರ್ಜಾಲ ಬಳಕೆಗೆ ಅನುವು ಮಾಡಿಕೊಡುತ್ತಿದ್ದಾರಂತೆ. ನೀವು ಮಾಡುವುದು ಇಷ್ಟೇ– 5 ರೂಪಾಯಿ ಕೊಟ್ಟು ಒಂದು ಕಪ್ ಚಹ ಖರೀದಿಸಿ. ಬಾಷಾ ವೈಫೈ ಪಾಸ್‌ವರ್ಡ್ ಇರುವ ಕೂಪನ್ ಕೊಡುತ್ತಾರೆ. ಇದರಿಂದಾಗಿ ಅವರ ಚಹದ ಉದ್ಯಮದ ವಹಿವಾಟು 4–5 ಪಟ್ಟು ಜಾಸ್ತಿಯಾಗಿದೆಯಂತೆ. ಚಹದ ಜೊತೆ ಚರ್ಚೆ ಹೋಗಿ ಈಗ ಚಾಯ್‌ವಾಲಾನ ಮೇಲೆ ಚರ್ಚೆ ಶುರುವಾದಂತಿದೆ.